# ನಾ ಮಾಡಿದ ಕರ್ಮ ಬಲವಂತವಾದರೆ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi.
4. **Note:** The wordings given without highlights are as per Ref. 1. The wordings mentioned in yellow highlights are as per Ref. 2. The wordings in Ref. 3 are almost similar to Ref. 2. Few minor variations as in Ref. 3 are not considered here.
5. **Note:** Singer has followed lyrics as in Ref. 2.

| | |
|---|---|
| ರಾಗ ಸಾವೇರಿ ತಾಳ ತ್ರಿವಿಡೆ | ರಾಗ ತೋಡಿ ತಾಳ ಅಟ್ಟ |
| | |
| ನಾ ಮಾಡಿದ ಕರ್ಮ ಬಲವಂತವಾದರೆ | ನಾ ಮಾಡಿದ ಕರ್ಮ ಬಲವಂತವಾದರೆ |
| ನೀ ಮಾಡುವದೇನೋ ದೇವ ॥ ಪ ॥ | ನೀ ಮಾಡುವುದೇನೋ ದೇವ |
| | |
| ಸಾಮಾನ್ಯವಲ್ಲವಿದು ಬ್ರಹ್ಮ ಬರೆದ ಬರಹ | ಸಾಮಾನ್ಯವಲ್ಲವಿದು ಬ್ರಹ್ಮ ಬರೆದ ಬರಹ |
| ನೇಮದಿಂದಲಿ ಎನ್ನ ಹಣೆಯಲ್ಲಿ ಬರೆದುದಕೆ ॥ ಅಪ ॥ | ನೇಮದಿಂದಲಿ ಎನ್ನ ಹಣೆಯಲ್ಲಿ ಬರೆದುದಕೆ |
| | |
| ಅನ್ನ ಪಾನಂಗಳಿಗೆ ಅಗ್ರಗಣ್ಯನಾಗಿ | ಅತಿಥಿಗಳಿಗೆ ಅನ್ನ ಕೊಟ್ಟವನಲ್ಲ ಪರ |
| ಸ್ನಾನ ಸಂಧ್ಯಾನ ಜಪ ತಪ ನೀಗಿ | ಸತಿಯರ ಸಂಗವ ಘಳಿಗೆ ಬಿಟ್ಟವನಲ್ಲ |
| ದಾನವಾಂತಕ ನಿನ್ನ ಧ್ಯಾನವ ಮಾಡದೆ | ಮತಿಹೀನನಾಗಿ ಮರುಳಾಗಿದ್ದೆನೊ ದೇವ |
| ಶ್ವಾನನಂತೆ ಮನೆ ಮನೆಯ ತಿರುಗುತಲಿದ್ದೆ ॥ ೧ ॥ | ಗತಿ ಯಾವುದೈ ಎನಗೆ ಗರುಡ ವಾಹನ ಕೃಷ್ಣ |
| | |
| ಅತಿಥಿಗಳಿಗೆ ಅನ್ನ ಕೊಟ್ಟವನಲ್ಲ ಪರ | ಅನ್ನ ಪಾನಂಗಳಿಗೆ ಅಗ್ರಗಣ್ಯನು ಆಗಿ |
| ಸತಿಯರ ಸಂಗ ಅರಘಳಿಗೆ ಬಿಟ್ಟವನಲ್ಲ | ಸ್ನಾನ ಸಂಧ್ಯಾದಿ ಕರ್ಮಂಗಳ ನೀಗಿ |
| ಮತಿಹೀನ ನಾನಾಗಿ ಮರುಳಾಗಿದ್ದೆನೊ ದೇವ | ದಾನವಾಂತಕ ನಿನ್ನ ಧ್ಯಾನವ ಮಾಡದೆ |
| ಗತಿ ಯಾವುದೆನಗಿನ್ನು ಗರುಡ ಗಮನ ಕೃಷ್ಣ ॥ ೨ ॥ | ಶ್ವಾನನಂತೆ ಮನೆ ಮನೆಯ ತಿರುಗುತಲಿದ್ದೆ |
| | |
| ಇನ್ನಾದರು ನಿನ್ನ ದಾಸರ ಸಂಗವಿತ್ತು | ಇನ್ನಾದರು ನಿನ್ನ ದಾಸರ ಸಂಗವನಿತ್ತು |
| ಮನ್ನಿಸಿ ಸಲಹಯ್ಯ ಮನ್ಮಥ ಜನಕ | ಮನ್ನಿಸಿ ದಯೆಮಾಡೊ ಮನ್ಮಥ ಜನಕ |
| ಅನ್ಯರೊಬ್ಬರ ಕಾಣೆ ಆದರಿಸುವರಿಲ್ಲ | ಅನ್ಯರೊಬ್ಬರ ಕಾಣೆ ಆದರಿಸುವರಿಲ್ಲ |
| ಪನ್ನಂಗ ಶಯನ ಶ್ರೀ ಪುರಂದರ ವಿಠ್ಠಲ ॥ ೩ ॥ | ಪನ್ನಂಗ ಶಯನ ಶ್ರೀ ಪುರಂದರ ವಿಠ್ಠಲ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಅಗ್ರಗಣ್ಯ** = ಮೊದಲಿಗ

**Classification:** Keerthane
**Ankita:** sri purandara vittala
**Location:** NA
**Category:** bhakti, vidhi chintane
**Sub-Category:** karma, brahma, athithi, anna, patni, garuda, Krishna, snana, japa, asura, Dhyana, nayi, deva, mane,
**Pravachana:** Vid Vittobha Acharya
**Explanation:** NA